536(351) ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕೃಷಿ ವಿಮೇ ಪರಿಹಾರ ನೀಡಲಾಗಿದೆಯೇ (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹೌದು. 2003ರ ಮುಂಗಾರು ಹಂಗಾಮಿನಲ್ಲಿ ಶಿವಮೊಗ್ಗ ಜಿಲ್ಲೆಗೆ ರೂ. 208, 97 ಲಕ್ಷಗಳನ್ನು ಬೆಳೆ ವಿಮಾ ನಷ್ಟ ಪರಿಹಾರವಾಗಿ ಇತ್ಯರ್ಥಪಡಿಸಲಾಗಿದೆ. ತಾಲ್ಲೂಕುವಾರು ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಿದ ವಿವರಗಳು ಈ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ.ಗಳಲ್ಲಿ)
1.	ಶಿವಮೊಗ್ಗ	12.39
2.	ಶಿಕಾರಿಪುರ	46.76
3.	ಸೊರಬ	149.82
4.	ಭದ್ರಾವತಿ	0.00
5.	ಹೊಸನಗರ	0.00
6.	ಸಾಗರ	0.00
7.	ತೀರ್ಥಹಳ್ಳಿ	0.00
	ಒಟ್ಟು	**208.97**

537(1107) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದ ರೈತರಿಗೆ 2003–04ನೇ ಸಾಲಿನ ಹಿಂಗಾರು ಮತ್ತು ಮುಂಗಾರು ಬೆಳೆ ನಾಶವಾದ ಕಾರಣ ಬೆಳೆ ವಿಮೆ ಹಣ ಬಿಡುಗಡೆ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಬಿಡುಗಡೆಯಾದ ಹಣ ಎಷ್ಟು;

ಇ) ಬಿಡುಗಡೆಗೆ ತಡವಾಗಲು ಕಾರಣವೇನು;

ಈ) ಬೆಳೆ ವಿಮೆ ಹಣ ವಿತರಣೆಯಲ್ಲಿ ತಾರತಮ್ಯ ಆಗಿರುವುದು ಹಾಗೂ ಬೆಳೆ ನಾಶದ ಸಮೀಕ್ಷೆಯಲ್ಲಿ ಲೋಪ ದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) 2003–04ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ಈಗಾಗಲೇ ಬಿಡುಗಡೆ ಮಾಡಿ ರೈತರಿಗೆ ನೀಡಲಾಗಿದೆ. 2003–04ನೇ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಆ) 2003ರ ಮುಂಗಾರು ಹಂಗಾಮಿನಲ್ಲಿ ರಾಜ್ಯದಾದ್ಯಂತ ಜಿಲ್ಲಾವಾರು ರೂ. 272.32 ಕೋಟಿಗಳನ್ನು ರೈತರಿಗೆ ಇತ್ಯರ್ಥಪಡಿಸಲಾಗಿದೆ.

ಇ) ಹಣ ಬಿಡುಗಡೆಗೆ ತಡವಾಗಲು ಕೇಂದ್ರ ಸರ್ಕಾರವು ರೂಪಿಸಿರುವ ಮಾರ್ಗಸೂಚಿಯಲ್ಲಿ ಅನುಸರಿಸಿರುವ ವಿಧಿ ವಿಧಾನಗಳು. ಪ್ರತಿ ಹಂಗಾಮಿನಲ್ಲಿ ನಿಗದಿತ ದಿನಾಂಕದೊಳಗೆ ರೈತರು ಯೋಜನೆಯಡಿಯಲ್ಲಿ ಭಾಗವಹಿಸಿದ ನಂತರ, ಬೆಳೆ ಕಟಾವಿಗೆ ಬಂದ ನಂತರ, ಬೆಳೆ ಕಟಾವು ಪ್ರಯೋಗಗಳನ್ನು ನಡಿಸುವುದು. ಬೆಳೆ ಕಟಾವು ಪ್ರಯೋಗಗಳಿಂದ ಬಂದ ಇಳುವರಿ ಮಾಹಿತಿಯನ್ನು ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸುವುದು. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಗೆ ಕಳುಹಿಸಿಕೊಡುವುದು. ನಂತರ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಮಾಹಿತಿಯನ್ನು ಪರಿಶೀಲಿಸಿ ಕ್ರೋಢೀಕರಿಸುವುದು ಮತ್ತು ವಿಮಾ ಸಂಸ್ಥೆಗೆ ಕಳುಹಿಸಿ ಕೊಡುವುದು ನಷ್ಟ ಪರಿಹಾರವನ್ನು ಲೆಕ್ಕ ಹಾಕಿ ಅಂತಿಮಗೊಳಿಸುವುದು. ನಂತರ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆಯುವುದು. ಇದಲ್ಲದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲಿನ ಹಣವನ್ನು ಪಡೆದು ನೋಡಲ್ ಬ್ಯಾಂಕ್‌ಗಳ ಮೂಲಕ ಸ್ಥಳೀಯ ಬ್ಯಾಂಕಿನ ಶಾಖೆಗಳಿಗೆ ಕಳುಹಿಸಿಕೊಡುವುದು. ಆದ್ದರಿಂದ ರೈತರು ವಿಮೆಗೆ ಒಳಪಟ್ಟ ನಂತರ ಸುಮಾರು ಒಂದು ವರ್ಷ ಕಾಲ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥ ಪಡಿಸಲು ಕಾಲಾವಕಾಶ ಬೇಕಾಗಿರುತ್ತದೆ.

ಈ) ಯೋಜನೆಯಡಿಯಲ್ಲಿ ಬೆಳೆ ಕಟಾವು ಪ್ರಯೋಗಗಳನ್ನು ನಡೆಸುವಲ್ಲಿ ಯಾವ ಲೋಪದೋಷಗಳು ಆಗಿರುವುದಿಲ್ಲ. ಒಂದು ಪ್ರದೇಶದಲ್ಲಿ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಬೇಕಾದರೆ ಆ ಪ್ರದೇಶದಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಕಂಡುಹಿಡಿಯಲಾಗುವ ವಾಸ್ತವಿಕ ಇಳುವರಿ ಮಾಹಿತಿಯು ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇರಬೇಕು. ಇಳುವರಿಯ ಕೊರತಿಗನುಗುಣವಾಗಿ ವಿಮೆ ಮಾಡಿಸಿದ ಎಲ್ಲಾ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. 2003–04ನೇ ಸಾಲಿನಲ್ಲಿ ಬೆಳೆಗಳನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟಕ್ಕೆ ಅಧಿಸೂಚಿಸಿರುವ ಪ್ರಯುಕ್ತ ಈ ಘಟಕಗಳಲ್ಲಿನ ಪ್ರಾರಂಭಿಕ ಇಳುವರಿ, ವಾಸ್ತವಿಕ ಇಳುವರಿ ಹಾಗೂ ಇಳುವರಿಯ ಕೊರತೆಯಲ್ಲಿ ವ್ಯತ್ಯಾಸವಿರುವುದರಿಂದ, ತಾಲ್ಲೂಕಿನಿಂದ ತಾಲ್ಲೂಕಿಗೆ ಮತ್ತು ಹೋಬಳಿಯಿಂದ ಹೋಬಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥ ಪಡಿಸುವಲ್ಲಿ ವ್ಯತ್ಯಾಸವಿರುತ್ತದೆ.

ಉ) ಉದ್ಭವಿಸುವುದಿಲ್ಲ.